ಫೆಬ್ರವರಿ 2-8, 1986
ರೂ. 2-00

# ತರಂಗ


ಸಮಗ್ರ ಕುಟುಂಬಕ್ಕೆ ಸಮೃದ್ಧ ಸಾಪ್ತಾಹಿಕ



## ಪೋಪ್ ಭಾರತ ದರ್ಶನ

ಡಾ. ಸಿದ್ಧಯ್ಯ ಪುರಾಣಿಕ

ವಿಳಾಸ: "ಶ್ರೀಗಿರಿ" 415 ಎ. ಆಲಿ ಅಸ್ಕರ್ ರಸ್ತೆ, ಬೆಂಗಳೂರು – 560 052



# ಹೊಸ ವರುಷದ ಹೊಸ ದಿನ

ಹೊಸ ವರುಷದ ಹೊಸದಿನವೆ ಬೇಕೆ
ಖುಷಿ ಪಡಲು,
ಹುಸಿ ಹಿಗ್ಗಿನ ಎಲುವು ಕಡಿಯಲು.
ಎಲುವು ಹರಿಸುವ
ಒಸಡಿನ ಕೆನ್ನೀರ ಕುಡಿಯಲು?

ಹೊಸ ವರುಷದ ಹಬ್ಬವ ಬೇಕೆ
ಕೃತಕ ಹರುಷದೊಡನೆ
ಕಣ್ಣು ಮುಚ್ಚಾಲೆಯಾಡಲು?
ಬಿಸಿಲು ನೆಳಲಿನ
ಮುಟ್ಟುವಾಟವಾಡಿ ಓಡಲು?

ಯಾಕೆ ಇಂದೇ
ಈ ಆಶಾವನ ವಿಹಾರ?
ಅದೇನೋ ಅಂತಾರಲ್ಲ, ಆ ಇಚಾರ?
ಹೊಸ ವರುಷ ಹೊಸ ಹರುಷ
ತರುವುದೆಂಬ ವಿಶ್ವಾಸ
ತರಲೆಂಬ ಆಶಾವಿಲಾಸ
ವಿಷ್ಟು ಸಲ ಹುಸಿ ಬಿದ್ದಿಲ್ಲ ಇದುವರೆಗೆ?
ಇಲ್ಲವೇ ಈ ಅಣಕ ನಾಟಕಕ್ಕೆ ಅಂಕಪರದೆ?

ಆಡಿದ್ದನ್ನೇ ಆಡುವ
ಹಾಡಿದ್ದನ್ನೇ ಹಾಡುವ
ಕಿಸುಬಾಯಿ ದಾಸರಿಗೆ
ಬುದ್ಧಿಯಿರದಿದ್ದರೆ ಹೋಗಲಿ.
ನಂಬಿ ನಂಬಿ ಮೋಸ ಹೋಗಿಯೂ
ಮೋಸ ಹೋದಷ್ಟೂ ವಿಶ್ವಾಸ ತಾಳಿ
ನಂಬಿದ್ದನ್ನೇ ನಂಬುವವರಿಗೆ ಬುದ್ಧಿ ಬರಬಾರದೆ?

ನಿನ್ನೆಯ ಬನ್ನದ ಬಸಿರಿನಲ್ಲಿಯೇ
ಬೆಳೆದ ಈ ಬರಡುದಿನ
ತಂದೀತೇ ತನ್ನಿಂದ ತಾನೆ
ಹಿಗ್ಗಿನ ಹೊಸ ಜನನ,
ಹರುಷದ ಹೊಸ ಔತಣ?

ನಮ್ಮ ಪೊಳ್ಳು ಆಸೆಗಳ ಜೊಳ್ಳು ಹೊತ್ತ
ಈ ಟೊಳ್ಳುದಿನ
ಕೊಟ್ಟೀತೆ ನಮಗೆ
ಹೊಸ ಹೊಂಬೆಳೆಯ ಸಾಂತ್ವನ?

ಕೈಲಾಗದವರ ಕನಸುಗಳಿಂದ
ನಪುಂಸಕರ ನನಸುಗಳಿಂದ
ಹೇಡಿಗಳ ಹಾರೈಕೆಗಳಿಂದ
ನರಸತ್ತವರ ಹರಕೆಗಳಿಂದ
ನಾವು ಬೇಡಿದಂದನೀವ ವರ್ತಮಾನದ
ಬಯಸಿದಂತೆ ಮೂಡುವ ಭವಿತವ್ಯದ
ನಿರ್ಮಾಣ ಸಾಧ್ಯವೆ?
ನಿರ್ವಾಣದ ದೇಶದಲ್ಲಿ
ನಿರ್ಮಾಣ ಸಾಧ್ಯವೆ?

ಸಾಧ್ಯವಾಗಿಸಲು
ಷಂಡತನ ನೀಗಿ
ಗಂಡುತನ ಬಿತ್ತಿರೋ.
ಇಂದಿನ ಉರದಲ್ಲಿ!
ಅದೊಂದೆ ಉಪಕಾರಿ
ಜೀವನದ ಧುರದಲ್ಲಿ!